# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು - 570 006.

**ಆಡಳಿತ ವಿಭಾಗ**


ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/642/2023-24 ದಿನಾಂಕ:30.09.2023

## ಷೋಕಾಸ್ ನೋಟಿಸ್-3

**ವಿಷಯ:** ಶ್ರೀಮತಿ ನಾಗರತ್ನ ಪ್ರಥಮ ದರ್ಜೆ ಗುಮಾಸ್ತೆ, ಪರೀಕ್ಷಾ ವಿಭಾಗ, ಕರಾಮುವಿ, ಇವರ ಅನಧಿಕೃತ ಗೈರುಹಾಜರಿ ಮತ್ತು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ಕುರಿತು.

**ಉಲ್ಲೇಖ:**
1. ಕುಲಸಚಿವರ ಸೂಚಿ ಪತ್ರ ಸಂಖ್ಯೆ:ಕರಾಮುವಿ/ಆವಿ/ಜಿಎಲ್-2/ಇತರೆ2008-09/2022-23, ದಿನಾಂಕ:09.03.2023.
2. ಕುಲಸಚಿವರ ಕಛೇರಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/08/2022-23, ದಿನಾಂಕ:17.03.2023.
3. ಕುಲಸಚಿವ (ಪರೀಕ್ಷಾಂಗ) ರವರ ಪತ್ರ ಸಂಖ್ಯೆ:ಕರಾಮುವಿ/ಪವಿ/ಸಾ.ಶಾ/34/1/2023-24, ದಿನಾಂಕ:27.04.2023.
4. ಈ ಕಛೇರಿಯ ಷೋಕಾಸ್ ನೋಟಿಸ್‌ನ ಸಮ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/642/2023-24, ದಿನಾಂಕ:25.05.2023.
5. ಈ ಕಛೇರಿಯ ಷೋಕಾಸ್ ನೋಟಿಸ್‌ನ ಸಮ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/642/2023-24, ದಿನಾಂಕ:14.07.2023.
6. ಅಂಚೆಯ ಮೂಲಕ ಕಳುಹಿಸಿರುವ ತಮ್ಮ ಹೇಳಿಕೆಯ ಪತ್ರ ದಿನಾಂಕ:27.07.2023
7. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:27.09.2023.

*****

ಶ್ರೀಮತಿ ನಾಗರತ್ನ ಪ್ರಥಮ ದರ್ಜೆ ಗುಮಾಸ್ತೆ, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು, ಆದ ತಾವು ದಿನಾಂಕ:25.02.2023ರಿಂದ ಇಂದಿನವರೆಗೂ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೇ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಅನಧಿಕೃತ ಗೈರುಹಾಜರಾಗಿದ್ದು, ಇದರಿಂದ ಕಛೇರಿ ಕೆಲಸ ಕುಂಟಿತವಾಗಿರುತ್ತದೆ ಹಾಗೂ ಅನಾನುಕೂಲವಾಗಿದೆ, ಈ ಸಂಬಂದ ಈಗಾಗಲೇ ಉಲ್ಲೇಖ(1)ರ ಸೂಚಿ ಪತ್ರ ನೀಡಲಾಗಿತ್ತು, ಸದರಿ ಸೂಚಿಗೆ ಯಾವುದೇ ಲಿಖಿತ ಸಮಜಾಯಿಸಿಯನ್ನು ನೀಡಿರುವುದಿಲ್ಲ ಹಾಗೂ ದೂರವಾಣಿ ಮೂಲಕ ಸಂಪರ್ಕಿಸಿ ಕಛೇರಿ ಕರ್ತವ್ಯಕ್ಕೆ ಹಾಜರಾಗಲೂ ತಿಳಿಸಿದ್ದರೂ ಸಹ ಇದುವರೆವಿಗೂ ಕಛೇರಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ, ಬೇಜವಾಬ್ದಾರಿಯ ನಿಮ್ಮ ನಡವಳಿಕೆ ಕಛೇರಿ ಸಭ್ಯತೆಯನ್ನು ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿರುವುದು ಕಂಡುಬಂದಿರುತ್ತದೆ.

ವಿಶ್ವವಿದ್ಯಾನಿಲಯದ ಸುಸೂತ್ರ ಆಡಳಿತ ನಿರ್ವಹಣೆಯ ದೃಷ್ಟಿಯಿಂದ ತಮ್ಮನ್ನು ಆಡಳಿತ ವಿಭಾಗದಿಂದ ಪರೀಕ್ಷಾ ವಿಭಾಗಕ್ಕೆ ವರ್ಗಾವಣೆ ಮಾಡಿ ಉಲ್ಲೇಖ (2)ರ ಆದೇಶ ಹೊರಡಿಸಲಾಗಿದ್ದು, ಸದರಿ ಆದೇಶದ ಪ್ರತಿಯನ್ನು ಅಂಚೆಯ ಮೂಲಕ ತಮ್ಮ ಮನೆ ವಿಳಾಸಕ್ಕೆ ರವಾನಿಸಲಾಗಿತ್ತು. ಆದರೆ ಪ್ರಸ್ತುತದವರೆವಿಗೂ ಪರೀಕ್ಷಾ ವಿಭಾಗದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲವೆಂದು ಉಲ್ಲೇಖ(3)ರ ಪತ್ರದಲ್ಲಿ ತಿಳಿಸಲಾಗಿದ್ದು, ತಾವು ವರ್ಗಾವಣೆಗೊಂಡ ವಿಭಾಗದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿಲ್ಲದಿರುವುದು ಹಾಗೂ ನಿಮ್ಮ ಅನಧಿಕೃತ ಗೈರುಹಾಜರಿಯು ಕಛೇರಿ ನಿಯಮವನ್ನು ಪಾಲಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದ್ದು, ವಿಶ್ವವಿದ್ಯಾನಿಲಯದ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ, ಆದ್ದರಿಂದ ವಿಶ್ವವಿದ್ಯಾನಿಲಯವು ಪ್ರಸ್ತುತ ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ವರ್ತನೆ) ಪರಿನಿಯಮದ ನಿಯಮ-3ಅನ್ನು ಉಲ್ಲಂಘಿಸಿದಂತಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಿ.ವಿ.ನಿಲಯವು ನಿಮ್ಮ ವಿರುದ್ಧ ಮೈಸೂರು ವಿ.ವಿ ಉದ್ಯೋಗಿಗಳ(ಸಿಸಿಎ) ಪರಿನಿಯಮದನ್ವಯ ಶಿಸ್ತುಕ್ರಮವಹಿಸಬಾರದೇಕೆ? ಎಂಬುದರ ಕುರಿತು ಷೋಕಾಸ್ ನೋಟಿಸ್ ತಲುಪಿದ ಏಳು(7) ದಿನಗಳೊಳಗಾಗಿ ನಿಮ್ಮ ಲಿಖಿತ ಸಮರ್ಥನೆಯನ್ನು ಕುಲಸಚಿವರಿಗೆ ಸಲ್ಲಿಸಿ ಕರ್ತವ್ಯಕ್ಕೆ ಹಾಜರಾಗಲು ತಿಳಿಸಿ ಉಲ್ಲೇಖ(4)ರ ಷೋಕಾಸ್ ನೋಟಿಸ್ ಅನ್ನು ತಮ್ಮ ವಿಳಾಸಕ್ಕೆ ಕಳುಹಿಸಲಾಗಿತ್ತು. ಆದರೆ

ಸದರಿ ಷೋಕಾಸ್ ನೋಟಿಸ್ ಅನ್ನು ತಾವು ಸ್ವೀಕರಿಸಿದೇ ಇರುವ ಸಂಬಂಧ ವಾಪಸ್ಸು ಕಛೇರಿಗೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ವಿ.ವಿ.ನಿಲಯವು ನಿಮ್ಮ ವಿರುದ್ಧ ಮೈಸೂರು ವಿ.ವಿ ಉದ್ಯೋಗಿಗಳ(ಸಿಸಿಎ) ಪರಿನಿಯಮದನ್ವಯ ಶಿಸ್ತುಕ್ರಮವಹಿಸಬಾರದೇಕೆ? ಎಂಬುದರ ಕುರಿತು ಎರಡನೇ ಬಾರಿ ಉಲ್ಲೇಖ(5)ರ ಷೋಕಾಸ್ ನೋಟಿಸ್ ಅನ್ನು ತಮ್ಮ ವಿಳಾಸಕ್ಕೆ ಕಳುಹಿಸಲಾಗಿತ್ತು. ಸದರಿ ಷೋಕಾಸ್ ನೋಟಿಸ್‌ಅನ್ನು ಸ್ವೀಕರಿಸಿ, ಅಂಚೆಯ ಮೂಲಕ ಕಳುಹಿಸಿರುವ ಉಲ್ಲೇಖ(6)ರ ಪತ್ರದಲ್ಲಿ ವೈಯಕ್ತಿಕ ಕಾರಣಗಳನ್ನು ತಿಳಿಸಿ ವರ್ಗಾವಣೆ ಮಾಡುವಂತೆ ಕೋರಿರುತ್ತೀರಿ. ಈ ನಿಮ್ಮ ಹೇಳಿಕೆಯು ಸಮಂಜಸವಾಗಿರುವುದಿಲ್ಲ, ಸದರಿ ನೋಟಿಸ್ ತಲುಪಿದ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಉದ್ಧಟತನದಿಂದ ಉತ್ತರಿಸಲಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ನಿಮ್ಮ ವಿವರಣೆಯನ್ನು ಒಪ್ಪಲು ಸಾಧ್ಯವಿಲ್ಲ, ಆದ್ದರಿಂದ ಮೂರನೇ ಬಾರಿ ಷೋಕಾಸ್ ನೋಟಿಸ್ ನೀಡುತ್ತಿದ್ದು, ಈ ಷೋಕಾಸ್ ನೋಟಿಸ್ ತಲುಪಿದ ಏಳು(7) ದಿನಗಳೊಳಗಾಗಿ ಕಛೇರಿ ಕರ್ತವ್ಯಕ್ಕೆ ಹಾಜರಾಗಿ ನಿಮ್ಮ ಲಿಖಿತ ಹೇಳಿಕೆಯನ್ನು ಕುಲಸಚಿವರಿಗೆ ಸಲ್ಲಿಸಲು ತಿಳಿಸಿದೆ.

ನಿಗಧಿತ ಅವಧಿಯೊಳಗೆ ಕಛೇರಿ ಕರ್ತವ್ಯಕ್ಕೆ ಹಾಜರಾಗದೇ ಹಾಗೂ ನಿಮ್ಮ ಲಿಖಿತ ಹೇಳಿಕೆ ಸಲ್ಲಿಕೆಯಾಗದಿದ್ದ ಪಕ್ಷದಲ್ಲಿ ನೀವು ಹೇಳುವುದು ಏನು ಇಲ್ಲವೆಂದು ಹಾಗೂ ವಿಶ್ವವಿದ್ಯಾನಿಲಯದ ಕೆಲಸವನ್ನು ನಿರ್ವಹಿಸಲು ನಿಮಗೆ ಆಸಕ್ತಿ ಇಲ್ಲವೆಂದು ಭಾವಿಸಿ ವಿಶ್ವವಿದ್ಯಾನಿಲಯವು ಪ್ರಸ್ತುತ ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ವರ್ತನೆ) ಪರಿನಿಯಮದನ್ವಯ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

**ಕುಲಸಚಿವ**
30-04-2023

ಗೆ,

**ಶ್ರೀಮತಿ ನಾಗರತ್ನ**, ಮನೆ ನಂ:6, 3ನೇ ಕ್ರಾಸ್, ವಿನಾಯಕ ನಗರ, ಮೈಸೂರು-12

**ಪ್ರತಿ:**

1. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
2. ಕುಲಸಚಿವ(ಪರೀಕ್ಷಾಂಗ), ಕರಾಮುವಿ, ಮೈಸೂರು.
3. ಡೀನ್(ಶೈಕ್ಷಣಿಕ), ಕರಾಮುವಿ, ಮೈಸೂರು.
4. ಡೀನ್ (ಅಧ್ಯಯನ ಕೇಂದ್ರಗಳು),ಕರಾಮುವಿ, ಮೈಸೂರು.
5. ಉಪಕುಲಸಚಿವರು,ಸಾಮಾನ್ಯ/ಕಾನೂನ ಘಟಕ, ಕರಾಮುವಿ, ಮೈಸೂರು.
6. ಎಲ್ಲಾ ನಿರ್ದೇಶಕರು/ಸಂಯೋಜನಾಧಿಕಾರಿಗಳು, ಕರಾಮುವಿ, ಮೈಸೂರು.
7. ಎಲ್ಲಾ ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರಗಳು.
8. ಡಾ. ನವೀನ್ ಕುಮಾರ್ ಸಿ.ಜಿ., ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು - ವಿ.ವಿ ನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
9. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
10. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
11. ಕಛೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.